# ರೂಪಾಂತರ ಹಾದಿಯಲ್ಲಿ ತಾಂಡವ್

## ಸುದರ್ಶನ್ ರಂಗಪ್ರಸಾದ್

ಕಲರ್ಸ್ ಕನ್ನಡದ 'ಭಾಗ್ಯಲಕ್ಷ್ಮೀ'ಯ ತಾಂಡವ್

■ ರಾಘವೇಂದ್ರ ಕೆ.



◆ **ನಟನೆಗೂ ನಿಮಗೂ ನಂಟು ಬೆಸೆದುಕೊಂಡಿದ್ದು ಹೇಗೆ?**

ಎಂಜಿನಿಯರಿಂಗ್ ಮಾಡಿದ ಮೇಲೆ ವಿವಿಧ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದೆ. ಆಮೇಲೆ ಜರ್ಮನಿಯಲ್ಲಿ ಎಂಬಿಎಗೆ ಸೇರಿದೆ. ಓದುವ ಸಮಯದಲ್ಲಿ ರಂಗಭೂಮಿ ಮತ್ತು ಕಿರುಚಿತ್ರಗಳಲ್ಲಿ ಕೆಲಸ ಮಾಡುವ ಆಸಕ್ತಿಯನ್ನು ಬೆಳೆಸಿಕೊಂಡಿದ್ದೆ. ಚಿಕ್ಕಪುಟ್ಟ ಪಾತ್ರಗಳನ್ನು ಮಾಡಿದೆ. ಅದರಲ್ಲೂ ಇಂಗ್ಲಿಷ್ ರಂಗಭೂಮಿಯಲ್ಲಿ ಹೆಚ್ಚಿನ ಸಮಯ ತೊಡಗಿಕೊಂಡಿದ್ದೆ. ಆಗಲೇ ಸಿನಿಮಾದಲ್ಲಿ ಕೆಲಸ ಮಾಡಬೇಕು ಎನ್ನುವ ಅಭಿಲಾಷೆ ಮೂಡಿತ್ತು. ಜರ್ಮನಿಗೆ ಹೊರಟಿರುವಾಗಲೇ 'ಗೂಗ್ಲಿ' ಸಿನಿಮಾಕ್ಕೆ ಅವಕಾಶ ಸಿಕ್ಕಿತು. ಅದರಲ್ಲಿ ಯಶ್ ಜೊತೆ ಕೆಲಸ ಮಾಡಿದಂತೆ ಆಯಿತು. ಅನೇಕ ಸಂದರ್ಭದಲ್ಲಿ ಇಬ್ಬರೂ ಮುಖಾಮುಖಿ ಆಗುತ್ತೇವೆ. ನಿರ್ದೇಶಕ ಪವನ್ ಒಡೆಯರ್ 'ಪ್ರೀತಿ ಗೀತಿ ಇತ್ಯಾದಿ' ಸಿನಿಮಾಕ್ಕೆ ಕರೆದರು. ಒಳ್ಳೆಯ ಅವಕಾಶ ಎಂದು ಓದನ್ನು ಅರ್ಧಕ್ಕೆ ನಿಲ್ಲಿಸಿ ಬಂದೆ. ನೆಗೆಟಿವ್ ಪಾತ್ರ ಅದೇ ಸಿನಿಮಾದಲ್ಲಿ ಸಂಗೀತಾ ಭಟ್ ನಾಯಕಿ ಆಗಿದ್ದರು. ಸಿನಿಮಾ ಮಾರುಕಟ್ಟೆಯಲ್ಲಿ ಯಶಸ್ವಿಯಾಗಲಿಲ್ಲ. ಆದರೆ ಸಂಗೀತಾ ಅವರ ಪ್ರೀತಿ ಸಿಕ್ಕಿತು.

ಸಿನಿಮಾದಲ್ಲಿ ಅವಕಾಶ ಸಿಕ್ಕ ತಕ್ಷಣ ನಮ್ಮ ಬದುಕಿಗೆ ಒಳ್ಳೆಯ ತಿರುವು ಸಿಕ್ಕುತ್ತದೆ ಎಂದು ಭಾವಿಸುತ್ತೇವೆ. ನಾನು ಜನಪ್ರಿಯ ನಟನಾಗುವ ಕನಸು ಕಂಡೆ. ಆದರೆ ಸಿನಿಮಾ ಯಶಸ್ಸು ಕಾಣದೆ ದೊಡ್ಡ ನಷ್ಟ ಆಯಿತು. ದುಡಿಮೆಯನ್ನು ನಂಬಿಕೊಂಡಿರುವ ವ್ಯಕ್ತಿ ನಾನು. ನಮ್ಮದು ಮೇಲ್ಮಧ್ಯಮ ವರ್ಗ ಎನ್ನಬಹುದು. ನಮ್ಮಂತಹ ಕುಟುಂಬಗಳಿಗೆ ಓದು ಒಂದೇ ಆಸ್ತಿ. ಶೈಕ್ಷಣಿಕವಾಗಿ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದೆ. ಇಲ್ಲಿ ಎಲ್ಲೋ ಎಡವಟ್ಟು ಮಾಡಿಕೊಂಡಿದ್ದೇನೆ ಎಂದು ಅನಿಸಿತು. ಸಿನಿಮಾ ನಟನೆಯ ಹುಚ್ಚು ಬುಡವನ್ನು ಅಲ್ಲಾಡಿಸಿತು. ಆಗ ಈ ಕ್ಷೇತ್ರ ಏನು ಎಂದು ಗೊತ್ತಾಯಿತು. ಆ ಅನುಭವದ ನಂತರ ಕೆಲಸವನ್ನು ಮುಂದುವರಿಸಿದೆ. ಕೆಲಸದ ಜೊತೆ ಅಭಿನಯವನ್ನೂ ಮಾಡುತ್ತಿದ್ದೇನೆ. ಭದ್ರತೆಗೆ ಕೆಲಸವನ್ನು ಇಟ್ಟುಕೊಂಡು ನನ್ನ ಪ್ಯಾಶನ್‌ನಲ್ಲಿ ಶೋಧ ಮಾಡುತ್ತಲೇ ಕಾರ್ಪೊರೇಟ್ ಕೆಲಸವನ್ನು ಮಾಡುತ್ತಿದ್ದೇನೆ.

◆ **ಕಾಮಿಡಿ ಶೋ ಆರಂಭಿಸಿದ್ದು ಹೇಗೆ?**

ಸಿನಿಮಾದಲ್ಲಿ ಹಿನ್ನಡೆ ಆಗಿದ್ದರಿಂದ ಏನು ಮಾಡಬೇಕು ಎಂದು ಗೊತ್ತಾಗಲಿಲ್ಲ. ಮತ್ತೆ ರಂಗಭೂಮಿಯ ಹವ್ಯಾಸವಂತೂ ಮುಂದುವರಿಯಿತು. ಅದೇ ಸಮಯದಲ್ಲಿ ಕನ್ನಡದಲ್ಲಿ ಸ್ಟ್ಯಾಂಡ್ ಅಪ್ ಕಾಮಿಡಿ ಹೊಸತು. ಗೆಳೆಯರು ಸೇರಿ 'ಲೋಲ್‌ಬಾಗ್' ಎಂಬ ಸ್ಟಾಂಡ್ ಅಪ್ ಕಾಮಿಡಿ ತಂಡವನ್ನು ಕಟ್ಟಿಕೊಂಡೆವು. ಅದರ ಮೂಲಕ ಕಾರ್ಯಕ್ರಮ ನೀಡಿದೆವು. ಯೂಟ್ಯೂಬ್‌ನಲ್ಲಿ ಸಖತ್ ಜನಪ್ರಿಯವಾಯಿತು. ಇದರಿಂದ ಸ್ಥಳೀಯವಾಗಿ ಗುರುತಿಸುವಂತೆ ಬೆಳೆದೆ. ಯೂಟ್ಯೂಬ್‌ನಲ್ಲಿ ಕಾಮಿಡಿ ಶೋ ನೋಡಿ ನೆಗೆಟಿವ್ ಪಾತ್ರಕ್ಕೆ ಆಡಿಷನ್‌ಗೆ ಕರೆದರು. ಮೂರು ನಾಲ್ಕು ಸುತ್ತಿನ ಕಠಿಣ ಆಡಿಷನ್ ನಂತರ ಈ ಅವಕಾಶ ಸಿಕ್ಕಿತು.ಇದಕ್ಕೆಲ್ಲ ನನ್ನ ಪತ್ನಿ ಟಿಪ್ಸ್ ಕೊಟ್ಟು ಸಿದ್ಧಗೊಳಿಸಿದರು.

◆ **ತಾಂಡವ್ ರೂಪಾಂತರ ಆಗುತ್ತಿರುವಂತೆ ಇದೆ. ಏನೀ ಬದಲಾವಣೆ?**

ರೂಪಾಂತರದ ಹಾದಿಯಲ್ಲಿ ಆ ಪಾತ್ರ ಇದೆ ಎಂದೆನಿಸುತ್ತಿದೆ. ಹಾಗೆ ಅನ್ನುವುದಕ್ಕಿಂತ ಆತನಿಗೆ ವಾಸ್ತವದ ಅರಿವು ಆಗುತ್ತಿದೆ ಎನ್ನಬಹುದು. ಆದರೆ ಏನಾಗುತ್ತದೆ ಎನ್ನುವ ಕುತೂಹಲ ವೈಯಕ್ತಿಕವಾಗಿ ನನ್ನಲ್ಲೂ ಇದೆ. ಏನೆಲ್ಲ ಆಗಬಹುದು ಎನ್ನುವುದನ್ನು ಕಾದು ನೋಡಬೇಕು. ಖಂಡಿತ ತಾಂಡವ್‌ಗೆ ತನ್ನ ತಪ್ಪು ಅರ್ಥ ಆಗಿದೆ. ಹೀಗೆ ಮಾಡಬಾರದಿತ್ತು ಎನ್ನುವ ವಿವೇಕ ಜಾಗೃತವಾಗಿದೆ. ಆದರೆ ಮುಂದೆ ಏನಾಗುತ್ತದೆ ನೋಡಬೇಕು.

◆ **ಈಗ ರಿಯಾಲಿಟಿ ಶೋ ಸೌಂಡ್ ಹೆಚ್ಚಿದೆ. ನಿಮಗೆ ಅಂತಹ ಅವಕಾಶ ಸಿಕ್ಕರೆ ಏನು ಮಾಡುತ್ತೀರಿ?**

ಆ ಬಗ್ಗೆ ಏನೆಂದು ಗೊತ್ತಿಲ್ಲ. ಒಂದು ವೇಳೆ ಅವಕಾಶ ಬಂದಾಗ ಯೋಚಿಸಬೇಕು. ಆ ಕ್ಷಣ ನನ್ನ ಮನೋಸ್ಥಿತಿ ಮತ್ತು ಕೆಲಸದ ಪರಿಸ್ಥಿತಿಗಳು ಅದನ್ನು ನಿರ್ಧರಿಸುತ್ತವೆ. ಈಗಲೇ ಮಾಡುತ್ತೇನೆ ಅಥವಾ ಇಲ್ಲ ಎನ್ನುವ ಅಂತಿಮ ನಿರ್ಧಾರ ತೆಗೆದುಕೊಳ್ಳಲು ಸಾಧ್ಯ ಆಗುವುದಿಲ್ಲ. ಎಲ್ಲದನ್ನೂ ಸಮಯ ನಿರ್ಧರಿಸುತ್ತದೆ.

◆ **ಸ್ಟ್ಯಾಂಡ್ ಅಪ್ ಕಾಮಿಡಿಯನ್ನು ಈಗಲೂ ಮಾಡಬಹುದೇ?**

ಯೌವನದ ಆ ಉತ್ಸಾಹ ಸದ್ಯ ಇಲ್ಲ. ಜೋಕ್ಸ್ ಹೇಳುವ ಕಲಾತ್ಮಕತೆ ನನ್ನಲ್ಲೇ ಕಡಿಮೆ ಆಗುತ್ತಿದೆ. ಆದರೆ ಕಾಮಿಡಿಯನ್ನು ನಟನೆಯ ಮೂಲಕ ಕಂಡುಕೊಂಡುಕೊಳ್ಳುವ ಪ್ರಯತ್ನ ಮಾಡುತ್ತೇನೆ. ಈಗ ಆ ಕ್ಷೇತ್ರದಲ್ಲಿಯೂ ಬೇಡಿಕೆ ಕಡಿಮೆ. ಅದರ ಜೊತೆಗೆ ದ್ವಂದ್ವಾರ್ಥದ ಸಂಭಾಷಣೆಗಳೂ ಬಂದವು. ಅಂತಹದ್ದಕ್ಕೆ ಜನಪ್ರಿಯತೆ ಬೇಗ ಸಿಗುತ್ತದೆ. ಅಲ್ಲಿ ಏನೋ ಸಾಂಕೇತಿಕವಾಗಿ ಮಾಡುತ್ತೇವೆ ಎನ್ನುವುದು ವ್ಯವಹಾರಿಕವಾಗಿ ಯಶಸ್ಸು ಸಿಗುವುದಿಲ್ಲ. ನನ್ನ ಪ್ರಕಾರ ಒಬ್ಬ ಅಜ್ಜಿ ಮೊಮ್ಮಗಳು ಒಟ್ಟಿಗೆ ಕೂತು ಎಂಜಾಯ್ ಮಾಡಿದರೆ ನನಗೆ ಖುಷಿ. ಈಗ ಕಾಮಿಡಿ ಮಾಡುವುದು ಕಷ್ಟ. ನನ್ನ ಹೆಂಡತಿಯನ್ನೇ ಕಾಮಿಡಿ ವಸ್ತು ಮಾಡಿದರೂ ಅದು ಸ್ತ್ರೀ ದ್ವೇಷಿ ಅನ್ನಿಸಬಹುದು. ನನ್ನನ್ನೇ ನಾನು ಎಷ್ಟು ಅಂತ ತಮಾಷೆಗೆ ಒಡ್ಡಿಕೊಳ್ಳಲು ಸಾಧ್ಯ? ಕೆಲವೊಮ್ಮೆ ಸೂಕ್ಷ್ಮ ವಿಷಯಗಳು ವಿವಾದವನ್ನು ಉಂಟುಮಾಡಬಹುದು. ಹಿಂದಿನ ಕಲಾ ಪ್ರಕಾರದಿಂದ ಮುಂದಿನ ಹಂತಕ್ಕೆ ಹೋಗಬೇಕು ಎಂದು ಅನ್ನಿಸಿದೆ. ■